**ಸಾಕ್ಷಿಯನ್ನು ದಿನಾಂಕಃ 14-07-2022 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ.ಕೆ.ಎಸ್.ಎನ್.ಜಿ ವಕೀಲರವರಿಂದಃ**

ನಾನು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ವಂಶವೃಕ್ಷವನ್ನು ಪ್ರಮಾಣಪತ್ರದೊಂದಿಗೆ ಹಾಜರುಪಡಿಸಿದ್ದು ಅವುಗಳನ್ನು ಅನುಕ್ರಮವಾಗಿ ನಿಪಿ 1 ಮತ್ತು 1 (ಎ) ಎಂದು ಗುರುತಿಸಲಾಯಿತು. ಖರೀದಿಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತೇನೆ ಸದರಿ ದಾಖಲೆಯ ಮೂಲ ಪ್ರತಿಯ ಬಗ್ಗೆ ವಿಚಾರಿಸಲಾಗಿ ಸದರಿ ದಾಖಲೆ ಪ್ರತಿವಾದಿಯ ಹತ್ತಿರ ಇರುತ್ತದೆ ಎಂದು ತಿಳಿಸಿರುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ನಿಪಿ 2 ಎಂದು, ಎಂ.ಆರ್.ನಂ.24/2010-11 ಹಾಜರುಪಡಿಸುತ್ತೇನೆ ನಿಪಿ 3 ಎಂದು, ಎಂ.ಇ.ನಂ.286/1995-96 ನೇದ್ದರ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತೇನೆ ಅದನ್ನು ನಿಪಿ 4 ಎಂದು, ಡೋರ್ ನಂ.787/ಸಿ1 / 741/ಸಿ1 / 787/ಸಿ ನೇದ್ದಕ್ಕೆ ಸಂಬಂದಿಸಿದ ಕರಾಕರಣೆಯಾದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 5 ಎಂದು, ತೆರಿಗೆ ಪಾವತಿ ರಶೀದಿಯನ್ನು ಹಾಜರುಪಡಿಸಿದ್ದು ನಿಪಿ 6 ಎಂದು, ಸರ್ವೆ ನಂ.351/11 ನೇದ್ದರ ಪಹಣಿಯನ್ನು ಹಾಜರುಪಡಿಸುತ್ತೇನೆ

ಅದನ್ನು ನಿಪಿ 7 ಎಂದು, ನೊಂದಾಯಿತ ಕ್ರಯಪತ್ರವನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ 8 ಎಂದು ಗುರುತಿಸಲಾಯಿತು. ಮುಖ್ಯಾಧಿಕಾರಿಗಳು ಹರಪನಹಳ್ಳಿ ಪಟ್ಟಣ ಪಂಚಾಯಿತಿಯವರು ನೀಡಿದ ಪ್ರತಿಯನ್ನು ನಿಪಿ.9 ಎಂದು, ತೆರಿಗೆ ಪಾವತಿ ರಶೀದಿಯನ್ನು ನಿಪಿ.10 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀಸವಾಲುಃ** ಶ್ರೀ.ಕೆ.ಬಿ.ಆರ್ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**